بسم اللهِ الرّحمٰن الرّحيم

# ಹಝ್ರತ್ ಉಮರ್(ರ)



(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25–06–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ. بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ ಇಂದು ಇನ್ನೂ ಹೇಳುವೆನು. ಝೈದ್ ಬಿನ್ ಅಸ್ಲಂ ತನ್ನ ತಂದೆಯಾದ ಅಸ್ಲಮ್‌ನಿಂದ ವರದಿ ಮಾಡುತ್ತಾರೆ: ಒಂದು ಬಾರಿ ಅವರು ಹಝ್ರತ್ ಉಮರ್(ರ)ರೊಂದಿಗೆ ಮದೀನದಿಂದ ಮೂರು ಮೈಲುಗಳ ದೂರದಲ್ಲಿರುವ ಸರಾರ್ ಎಂಬ ಜಾಗದಲ್ಲಿ ಇದ್ದರು. ಅಲ್ಲೊಬ್ಬ ಯಾತ್ರಿಕನು ರಾತ್ರಿಯ ಮತ್ತು ಚಳಿಯ ಕಾರಣದಿಂದ ಕಷ್ಟವನ್ನು ಅನುಭವಿಸುತ್ತಿರುವುದನ್ನು ಅವರು ಕಂಡರು. ಅವರು ಆ ವ್ಯಕ್ತಿಯ ಸಮೀಪಕ್ಕೆ ಹೋಗಿ ನೋಡಿದರು. ಅಲ್ಲಿ ಒಬ್ಬಾಕೆ ಸ್ತ್ರೀ ತನ್ನ ಕೆಲವು ಮಕ್ಕಳೊಂದಿಗೆ ಇದ್ದಳು. ಒಂದು ಮಡಿಕೆಯನ್ನು ಒಲೆಯಲ್ಲಿ ಇರಿಸಲಾಗಿತ್ತು. ಮಕ್ಕಳು ಹಸಿವೆಯ ಕಾರಣದಿಂದ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಮಕ್ಕಳು ಅಳಲು ಕಾರಣವೇನೆಂದು ಆ ಮಹಿಳೆಯೊಡನೆ ಹಝ್ರತ್ ಉಮರ್(ರ) ಕೇಳಿದರು. ಮಕ್ಕಳು ಹಸಿವೆಯ ಕಾರಣದಿಂದ ಅಳುತ್ತಿದ್ದಾರೆ ಎಂದು ಅವಳು ಹೇಳಿದಳು. ಈ ಮಡಿಕೆಯಲ್ಲಿ ಏನಿದೆ ಎಂದು ಅವರು ಕೇಳಿದರು. ಆ ಸ್ತ್ರೀ ಹೇಳಿದಳು: ಅದರಲ್ಲಿ ನೀರು ಮಾತ್ರವಿದೆ ಮತ್ತು ಮಕ್ಕಳು ನಿದ್ದೆ ಹೋಗುವಂತೆ ಮಾಡಲು ಅದರ ನೆಪದಲ್ಲಿ ಮಕ್ಕಳನ್ನು ಸಮಾಧಾನಪಡಿಸುತ್ತಿದ್ದೇನೆ. ಅಲ್ಲಾಹನು ನಮ್ಮ ಮತ್ತು ಉಮರರ ನಡುವೆ ತೀರ್ಮಾನ ಮಾಡುವನು. ಹಝ್ರತ್ ಉಮರ್(ರ) ಹೇಳಿದರು: ಹೇ ಸ್ತ್ರೀ, ಅಲ್ಲಾಹನು ನಿನ್ನ ಮೇಲೆ ಕೃಪೆದೋರಲಿ. ಉಮರಿಗೆ ನಿಮ್ಮ ಸ್ಥಿತಿಯ ಬಗ್ಗೆ ಹೇಗೆ ಗೊತ್ತಾಗುವುದು. ಆ ಸ್ತ್ರೀ ಹೇಳಿದಳು: ಉಮರ್ ನಮ್ಮ ಕಾರ್ಯಗಳ ಮೇಲ್ನೋಟಗಾರರಾಗಿರುವರು, ಆದರೆ ಅವರು ನಮ್ಮ ಬಗ್ಗೆ ಗಮನಹರಿಸುತ್ತಿಲ್ಲ. ಅಸ್ಲಂ ಹೇಳುತ್ತಾರೆ: ಹಝ್ರತ್ ಉಮರ್(ರ) ಮಕ್ಕ ಮತ್ತು ಮದೀನದ ನಡುವೆ ಅನೇಕ ಛತ್ರಗಳನ್ನು ನಿರ್ಮಿಸಿದ್ದರು. ಅಲ್ಲಿ ಯಾತ್ರಿಕರಿಗೆ ಎಲ್ಲ ಆವಶ್ಯಕ ವಸ್ತುಗಳನ್ನು ಒದಗಿಸಲಾಗಿತ್ತು. ಅವರು ಬೇಗಬೇಗನೇ ನಡೆಯುತ್ತಾ ಧಾನ್ಯಗಳು ಇರುವ ಒಂದು ಗೋದಾಮಿಗೆ ತಲುಪಿದರು. ಅವರು ಒಂದು ಗೋಣಿ ಚೀಲ ಧಾನ್ಯ ಮತ್ತು ಒಂದು ಡಬ್ಬಿ ಎಣ್ಣೆಯನ್ನು ತೆಗೆದುಕೊಂಡು ಅವುಗಳನ್ನು ಅವರ ಹೆಗಲ ಮೇಲೆ ಇರಿಸಲು ಹೇಳಿದರು. ಅಸ್ಲಂ ಹೇಳುತ್ತಾರೆ: ನಿಮ್ಮ ಬದಲಾಗಿ ನಾನು ಅದನ್ನು ಎತ್ತುವೆನು ಎಂದು ನಾನು ಹೇಳಿದೆ. ಆದರೆ ಅವುಗಳನ್ನು ಅವರ ಹೆಗಲಲ್ಲಿ ಇರಿಸಲು ಎರಡು ಮೂರು ಬಾರಿ ಅವರು ಹೇಳಿದರು. ಕೊನೆಗೆ ನಾನು ಇನ್ನೂ ಒತ್ತಾಯಿಸಿದಾಗ ಹಝ್ರತ್ ಉಮರ್(ರ) ನನ್ನೊಡನೆ ಕೇಳಿದರು: ನಿನಗೆ ಒಳ್ಳೆಯದಾಗಲಿ, ಖಿಯಾಮತ್ ದಿನದಂದು ಸಹ ನನ್ನ ಭಾರವನ್ನು ನೀನು ಹೊರುವೆಯಾ? ಅನಂತರ ಅವರು ಆ ಹೊರೆಯನ್ನು ಎತ್ತಿ ವೇಗವಾಗಿ ಆ ಹೆಂಗಸಿನ ಬಳಿಗೆ ಮರಳಿ ಹೋದರು. ಊಟ ತಯಾರಿಸುವುದರಲ್ಲಿ ಆ ಬಡ ಸ್ತ್ರೀಗೆ ನೆರವಾದರು. ಮಕ್ಕಳು ಹೊಟ್ಟೆ ತುಂಬ ಊಟ ಮಾಡಿ ನಿದ್ದೆ ಮಾಡಲು ಹೋಗುವ ತನಕ ಅವರು ಅಲ್ಲೇ ಇದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ)ರ ಗಾಂಭೀರ್ಯ ಮತ್ತು ವೈಭವಕ್ಕೆ ಭಯಪಟ್ಟು ರೋಮ್ ಮತ್ತು ಪೇರ್ಶಿಯದ ಆಡಳಿತಗಳು ನಡುಗುತ್ತಿದ್ದುವು. ಆದರೆ ಅಂತಹ ಉಮರ್(ರ) ಗ್ರಾಮವಾಸಿಯಾದ ಒಬ್ಬಳು ಹೆಂಗಸಿನ ಮಕ್ಕಳು ಹಸಿವೆಯಿಂದ ಇರುವುದನ್ನು ನೋಡಿದಾಗ ತಳಮಳಗೊಳ್ಳುತ್ತಾರೆ. ನಿರ್ಗತಿಕರಾದ ಜನರ ಆವಶ್ಯಕತೆಗಳನ್ನು ಪೂರೈಸುವುದು ಇಸ್ಲಾಮಿಕ ಆಡಳಿತದ ಕರ್ತವ್ಯವಾಗಿದೆ. ನಿರ್ಗತಿಕರಿಗೆ ಪಿಂಚಣಿಗಳನ್ನು ನೀಡುವುದು ಅವರು ಸೋಮಾರಿ ಮತ್ತು ಆಲಸಿಗರಾಗಲಿಕ್ಕಲ್ಲ. ಬಡವರನ್ನು ಸಹಾಯ ಮಾಡಲು ಇಸ್ಲಾಂ ಆದೇಶಿಸುವುದರೊಂದಿಗೆ, ಭಿಕ್ಷೆ ಬೇಡುವುದರಿಂದ ಜನರನ್ನು ತಡೆಯುತ್ತದೆ. ಒಂದು ಬಾರಿ ಹಝ್ರತ್ ಉಮರ್(ರ) ಒಬ್ಬ ಭಿಕ್ಷುಕನನ್ನು ಕಂಡರು. ಅವನ ಜೋಳಿಗೆ ತುಂಬ ಹಿಟ್ಟು ಇತ್ತು. ಆದರೂ ಭಿಕ್ಷೆ ಬೇಡುತ್ತಿದ್ದನು. ಹಝ್ರತ್ ಉಮರ್(ರ) ಅವನಿಂದ ಹಿಟ್ಟನ್ನು ಕಸಿದುಕೊಂಡು ಒಂಟೆಗಳಿಗೆ ಹಾಕಿದರು. "ಇನ್ನು ನೀನು ಭಿಕ್ಷೆ ಬೇಡು" ಎಂದು ಅವನೊಡನೆ ಹೇಳಿದರು.

ಹಝ್ರತ್ ಉಮರ್(ರ) ಸ್ವತಂತ್ರಗೊಳಿಸಿದ ಈ ಗುಲಾಮನಾದ ಅಸ್ಲಂ ಮತ್ತೊಂದು ಘಟನೆಯನ್ನು ವಿವರಿಸುತ್ತಾರೆ: ಒಂದು ಬಾರಿ ವ್ಯಾಪಾರಿಗಳ ಒಂದು ಸಂಘ ಮದೀನಕ್ಕೆ ಬಂತು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನು ಜೊತೆಗೆ ಸೇರಿಸಿಕೊಂಡು ಹಝ್ರತ್ ಉಮರ್(ರ) ಆ ವ್ಯಾಪಾರಿ ತಂಡಕ್ಕೆ ಸಂರಕ್ಷಣೆ ನೀಡಲು ಹೊರಟರು. ಒಂದು ಚಿಕ್ಕ ಮಗುವಿನ ಅಳು ಅವರನ್ನು ಅಸಮಾಧಾನಗೊಳಿಸಿತು. ಮಗುವನ್ನು ನೋಡಿಕೊಳ್ಳಲು ತಾಯಿಯೊಡನೆ ಹೇಳಿದರು. ಆದರೆ ಮಗುವಿನ ಅಳು ರಾತ್ರಿ ಪೂರ್ತಿ ಕೇಳಿಬರುತ್ತಿತ್ತು. ಬೆಳಿಗ್ಗೆ ಆಗುತ್ತಲೇ ಹಝ್ರತ್ ಉಮರ್(ರ) ಆ ಹೆಂಗಸಿನ ಡೇರೆಗೆ ಹೋದರು. ಮಗು ಅಳುವುದಕ್ಕೆ ಕಾರಣವೇನೆಂದು ಕೇಳಿದರು. ಆ ಸ್ತ್ರೀ ಹೇಳಿದಳು: ನಾನು ಇವನಿಗೆ ಹಾಲಿನ ಬದಲಿಗೆ ಇತರ ಆಹಾರವನ್ನು ನೀಡಲು ಪ್ರಯತ್ನಿಸುತ್ತಿದ್ದೇನೆ. ಆದರೆ ಇವನು ಹಾಲನ್ನೇ ಕೇಳುತ್ತಿದ್ದಾನೆ. ಹಾಗೆ ಏಕೆ ಮಾಡುತ್ತಿದ್ದೀಯ ಎಂದು ಅವರು ಕೇಳಿದರು. ಆಗ ಆ

ಹೆಂಗಸು ಹೇಳಿದಳು: ಹಾಲು ಕುಡಿಯುವುದನ್ನು ಬಿಟ್ಟಿರುವ ಮಕ್ಕಳಿಗೆ ಮಾತ್ರ ಉಮರ್ ಪಿಂಚಣಿ ನಿಶ್ಚಯಿಸಿರುವರು. ಆಗ ಮಗುವಿನ ವಯಸ್ಸು ಎಷ್ಟೆಂದು ಕೇಳಿದ ನಂತರ ಇಷ್ಟು ಬೇಗ ಹಾಲನ್ನು ಬಿಡಿಸಬೇಡ ಎಂದು ಹೇಳಿದರು. ಆ ದಿನದಂದು ಉಮರ್(ರ) ಜನರಿಗೆ ಫಜ್ರ್ ನಮಾಝಿನ ಇಮಾಮತ್ ವಹಿಸಿದರು. ಅವರು ಅಳುತ್ತಿದ್ದ ಕಾರಣದಿಂದ ಅವರು ಓದುವುದು ಸ್ಪಷ್ಟವಾಗುತ್ತಿರಲಿಲ್ಲ. ಅನಂತರ ಹಝ್ರತ್ ಉಮರ್(ರ) ಸ್ವತಃ ಹೇಳಿದರು: ಹೇ ಉಮರ್, ನೀನು ಎಷ್ಟು ಕೆಟ್ಟವನು, ನೀನು ಎಷ್ಟೆಲ್ಲ ಮುಸ್ಲಿಂ ಮಕ್ಕಳನ್ನು ಕೊಂದಿದ್ದೀಯ. ಅನಂತರ ಹಝ್ರತ್ ಉಮರ್(ರ) ಘೋಷಣೆ ಮಾಡಿಸಿದರು ಮತ್ತು ದೇಶದೆಲ್ಲಡೆ ಹೀಗೆ ಅಪ್ಪಣೆ ನೀಡಿದರು: ಮಕ್ಕಳಿಂದ ಬೇಗನೇ ಹಾಲು ಬಿಡಿಸಬೇಕಾಗಿಲ್ಲ. ಹುಟ್ಟಿದ ಪ್ರತಿಯೊಂದು ಮಗುವಿಗೂ ನಾವು ಪಿಂಚಣಿಯನ್ನು ನಿಶ್ಚಯಿಸುತ್ತೇವೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ರಾತ್ರಿ ಹಝ್ರತ್ ಉಮರ್(ರ) ಸುತ್ತಾಡುತ್ತಿದ್ದರು. ಒಬ್ಬಳು ಸ್ತ್ರೀ ಪ್ರೇಮಗೀತೆ ಹಾಡುತ್ತಿರುವುದು ಕೇಳಿಸಿತು. ಆ ಹೆಂಗಸಿನ ಪತಿ ಸೈನ್ಯದಲ್ಲಿ ಇರುವರು ಮತ್ತು ದೀರ್ಘಕಾಲದಿಂದ ಹೊರಗೆ ಇರುವರು ಎಂದು ಇದರ ಕುರಿತು ಹಝ್ರತ್ ಉಮರ್(ರ) ತನಿಖೆ ನಡೆಸಿದಾಗ ಗೊತ್ತಾಯಿತು. ಆಗ ಯಾವನೇ ಸಿಪಾಯಿ ನಾಲ್ಕು ತಿಂಗಳಿಗಿಂತ ಹೆಚ್ಚು ಕಾಲ ಹೊರಗೆ ಇರಬಾರದು ಎಂದು ಅವರು ಆದೇಶ ಹೊರಡಿಸಿದರು.

ಅದೇ ರೀತಿಯಲ್ಲಿ ಒಂದು ರಾತ್ರಿ ಹಝ್ರತ್ ಉಮರ್(ರ) ಮದೀನದ ಹೊರಗಿನ ಭಾಗದಲ್ಲಿ ಇದ್ದರು. ಸ್ತ್ರೀಯೊಬ್ಬಳು ಹೆರಿಗೆಯ ನೋವಿನ ಕಾರಣದಿಂದ ನರಳಾಡುತ್ತಿರುವ ಶಬ್ದ ಒಂದು ಡೇರೆಯಿಂದ ಕೇಳಿಬರುತ್ತಿತ್ತು. ಹಝ್ರತ್ ಉಮರ್(ರ) ಆ ಮಹಿಳೆಯ ಸ್ಥಿತಿಯ ಬಗ್ಗೆ ಕೇಳಿದರು. ಅವಳು ಹೇಳಿದಳು: ನಾನು ಪರದೇಶಿ ಯಾತ್ರಿಕಳಾಗಿದ್ದೇನೆ. ನನ್ನ ಬಳಿ ಏನೂ ಇಲ್ಲ. ಇದನ್ನು ಕೇಳಿದಾಗ ಹಝ್ರತ್ ಉಮರ್(ರ) ತನ್ನ ಮನೆಗೆ ಮರಳಿ ಹೋದರು ಮತ್ತು ತನ್ನ ಪತ್ನಿಯಾದ ಹಝ್ರತ್ ಉಮ್ಮೇ ಕುಲ್ಸುಮ್ ಬಿನ್ತ್ ಅಲಿಯಿಂದ ಬಾಣಂತಿಗೆ ಆವಶ್ಯವಾದ ವಸ್ತುಗಳನ್ನು ಹಾಗೂ ಹಿಟ್ಟು ಮತ್ತು ಎಣ್ಣೆ ಇತ್ಯಾದಿಗಳನ್ನು ಸಿದ್ಧಪಡಿಸುವಂತೆ ಹೇಳಿ ಅದನ್ನು ತೆಗೆದುಕೊಂಡು ಅವರು ಆ ಮಹಿಳೆಯ ಬಳಿಗೆ ಹೋದರು. ಹಝ್ರತ್ ಉಮರ್(ರ) ಆ ಮಹಿಳೆಯ ಪತಿಯೊಂದಿಗೆ ಹೊರಗೆ ಕುಳಿತುಕೊಂಡರು. ಸ್ವಲ್ಪ ಸಮಯದ ನಂತರ ಹಝ್ರತ್ ಉಮ್ಮೇ ಕುಲ್ಸುಂ ಬಂದು ಹೇಳಿದರು: ಹೇ ಅಮೀರುಲ್ ಮೂಮಿನೀನ್, ನಿಮ್ಮ ಸಂಗಡಿಗನಿಗೆ ಗಂಡು ಮಗುವಿನ ಶುಭವಾರ್ತೆಯನ್ನು ನೀಡಿರಿ. ಅಮೀರುಲ್ ಮುಅ್‌ಮಿನೀನ್ ಎಂದು ಕರೆಯುವುದನ್ನು ಕೇಳಿದಾಗ ಅದು ಹಝ್ರತ್ ಉಮರ್(ರ) ಆಗಿದ್ದರು ಎಂದು ಆ ವ್ಯಕ್ತಿಗೆ ಗೊತ್ತಾಯಿತು.

ಹಝ್ರತ್ ಅಲಿ(ರ) ಹೇಳುತ್ತಾರೆ: ಒಂದು ಸಲ ಹಝ್ರತ್ ಉಮರ್(ರ) ಬಹಳ ವೇಗವಾಗಿ ಎಲ್ಲಿಗೋ ಹೋಗುತ್ತಿರುವುದನ್ನು ನಾನು ಕಂಡೆನು. ಯಾ ಅಮೀರಲ್ ಮೂಮಿನೀನ್ ನೀವು ಎಲ್ಲಿಗೆ ಹೋಗುತ್ತಿದ್ದೀರಿ ಎಂದು ನಾನು ಕೇಳಿದೆ. ಹಝ್ರತ್ ಉಮರ್(ರ) ಹೇಳಿದರು: ಸದಖದ ಒಂದು ಒಂಟೆ ಓಡಿಹೋಗಿದೆ. ಅದನ್ನು ಹುಡುಕಲು ಹೋಗುತ್ತಿದ್ದೇನೆ. ಹಝ್ರತ್ ಅಲಿ(ರ) ಹೇಳಿದರು: ನೀವು ನಿಮ್ಮ ನಂತರ ಬರುವ ಖಲೀಫರಿಗೆ ಬಹಳ ಕಷ್ಟದಾಯಕವಾದ ಮಾರ್ಗವನ್ನು ನಿಶ್ಚಯಿಸಿದ್ದೀರಿ. ಹಝ್ರತ್ ಉಮರ್(ರ) ಹೇಳಿದರು: ನನ್ನನ್ನು ದೂರಬೇಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರವಾದಿತ್ವದೊಂದಿಗೆ ಕಳುಹಿಸಿದ ಅಲ್ಲಾಹನ ಆಣೆ, ಒಂದು ಆಡಿನ ಮರಿ ಕೂಡ ಫರಾತ್ ನದಿಯ ದಡದಲ್ಲಿ ಕಾಣೆಯಾದರೆ, ಖಿಯಾಮತಿನ ದಿನ ಅದರ ಕಾರಣದಿಂದ ಉಮರ್ ಹಿಡಿಯಲ್ಪಡುವನು.

ಕ್ರೈಸ್ತ ಗೋತ್ರದ ಒಬ್ಬ ಬಹಳ ದೊಡ್ಡ ಸರದಾರನಾದ ಜಬ್ಲ ಬಿನ್ ಐಹಂ ಮುಸ್ಲಿಮನಾದರು. ಹಜ್ಜಿನ ವೇಳೆ ಒಬ್ಬ ಬಡ ಮುಸ್ಲಿಮನ ಕಾಲು ಅವರ ಕಾಲಿಗೆ ತಗುಲಿತು. ಜಬ್ಲ ಕೋಪದಿಂದ ಆ ಬಡ ಮುಸ್ಲಿಮನ ಕೆನ್ನೆಗೆ ಹೊಡೆದರು. ಆ ಮುಸ್ಲಿಮನ ಪ್ರತಿಕಾರವನ್ನು ಹಝ್ರತ್ ಉಮರ್(ರ) ನಿನ್ನಿಂದ ಪಡೆಯುವರು ಎಂದು ಜಬ್ಲರೊಡನೆ ಯಾರೋ ಹೇಳಿದರು. ಇದನ್ನು ಕೇಳಿದಾಗ ಜಬ್ಲ ಹಝ್ರತ್ ಉಮರ್(ರ)ರ ಬಳಿಗೆ ಹೋಗಿ ಕೇಳಿದರು: ಬಹಳ ಶ್ರೇಷ್ಠನಾದ ಒಬ್ಬ ವ್ಯಕ್ತಿ ಯಾವನೇ ಸಾಧಾರಣ ವ್ಯಕ್ತಿಯ ಕೆನ್ನೆಗೆ ಹೊಡೆದರೆ ನೀವು ಏನು ಮಾಡುವಿರಿ. ಹಝ್ರತ್ ಉಮರ್(ರ) ಹೇಳಿದರು: ಇಸ್ಲಾಮಿನಲ್ಲಿ ದೊಡ್ಡವ ಸಣ್ಣವ ಎಂಬ ವ್ಯತ್ಯಾಸವಿಲ್ಲ. ಅನಂತರ ಹಝ್ರತ್ ಉಮರ್(ರ) ಕೇಳಿದರು: ನೀನೇ ಈ ತಪ್ಪು ಮಾಡಲಿಲ್ಲ ತಾನೆ? ಆಗ ಜಬ್ಲ ಹೀಗೆ ಸುಳ್ಳು ಹೇಳುತ್ತಾ ಹೇಳಿದರು: ನಾನು ಹೀಗೆಯೇ ಒಂದು ಪ್ರಶ್ನೆ ಕೇಳಿದೆನಷ್ಟೆ. ಹೀಗೆ ಹೇಳುತ್ತಾ ಅಲ್ಲಿಂದ ಹೊರಟು ಹೋಗಿ ತನ್ನ ಸಮುದಾಯ ಸಮೇತ ಇಸ್ಲಾಂ ಧರ್ಮವನ್ನು ತ್ಯಜಿಸಿ ಇಸ್ಲಾಮಿಕ ಆಡಳಿತದ ವಿರುದ್ಧ ರೋಮನ್ನರು ನಡೆಸಿದ ಯುದ್ಧದಲ್ಲಿ ಭಾಗಿಯಾದರು. ಆದರೆ ಹಝ್ರತ್ ಉಮರ್(ರ) ಅದರ ಪರಿವೆ ಮಾಡಲಿಲ್ಲ. ಇಸ್ಲಾಮಿಕ ಆಡಳಿತಗಳು ಸ್ಥಾಪಿಸಿದ ಸಮಾನತೆ ಇದಾಗಿತ್ತು. ಇಂದಿನ ಇಸ್ಲಾಮಿಕ ಆಡಳಿತಕ್ಕೂ ಇದು ಒಂದು ಪಾಠವಾಗಿದೆ.

(ಹಝ್ರತ್ ಉಮರರ ಬಗ್ಗೆಗಿನ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹಝ್ರತ್ ಖಲೀಫತುಲ್ ಮಸೀಹರು ನಾಲ್ವರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗಾಇಬ್ ನಿರ್ವಹಿಸುವುದಾಗಿ ಘೋಷಿಸಿದರು:)

ಮೊದಲನೆಯದಾಗಿ ಜರ್ಮನಿಯ ವಾಲ್ಡ್‌ಶಟ್ ಜಮಾಅತಿನ ಸದರ್ ಆಗಿದ್ದ ಸನ್ಮಾನ್ಯ ಅಬ್ದುಲ್‌ವಹೀದ್ ವಡಾಇಚ್ ಸಾಹಿಬ್‌ರದ್ದಾಗಿದೆ. ಅವರು ಸ್ವಿಝರ್‌ಲ್ಯಾಂಡಿನ ಮಾಜಿ ಸದರ್ ಖುದ್ದಾಮುಲ್ ಅಹ್ಮದಿಯಾ ಮತ್ತು ಮಾಜಿ ಸೆಕ್ರಟರಿ ತರ್‌ಬಿಯತ್ ಆಗಿದ್ದರು. ಮೇ 12ರಂದು ಮೌಂಟ್ ಎವರೆಸ್ಟನ್ನು ವಿಜಯಕರವಾಗಿ ಏರಿಕೊಂಡು ಅದರ ಮೇಲೆ ಅಹ್ಮದಿಯ್ಯತಿನ ಧ್ವಜವನ್ನು ಹಾರಿಸಿದ ನಂತರ ಕೆಳಗೆ ಇಳಿಯುವಾಗ ಆರೋಗ್ಯ ಕೆಟ್ಟುಹೋದ ಕಾರಣದಿಂದ 41ನೇ ವಯಸ್ಸಿನಲ್ಲಿ ಅವರು ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ

ರಾಜಿಊನ್. ದಿವಂಗತರು ಪತ್ನಿಯನ್ನಲ್ಲದೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ತಂದೆ ತಾಯಂದಿರು ಒಬ್ಬ ಸಹೋದರ ಮತ್ತು ಇಬ್ಬರು ಸಹೋದರಿಯರನ್ನು ಅಗಲಿರುವರು.

ದಿವಂಗತರು ಒಬ್ಬ ಮಾದರಿ ಅಹ್ಮದಿಯಾಗಿದ್ದರು. ಅವರಲ್ಲಿ ಜನಸೇವೆಯ ಅಪರಿಮಿತವಾದ ಆವೇಶವಿತ್ತು. ಅವರು ನನ್ನನ್ನು ಭೇಟಿಯಾಗಿದ್ದರು. ಏಳು ಭೂಖಂಡಗಳ ಉತ್ತುಂಗಕ್ಕೆ ತಲುಪಿಕೊಂಡು ಅವುಗಳಲ್ಲಿ ಅಹ್ಮದಿಯ್ಯತ್ತಿನ ಬಾವುಟವನ್ನು ಹಾರಿಸಲು ಅನುಮತಿಯನ್ನು ಪಡೆದರು. ನಾನು ಬೇಡವೆಂದು ಹೇಳುವೆನು ಎಂಬ ಭಯ ಅವರಿಗೆ ಇತ್ತು. ಆದರೆ ನಾನು ಅವರೊಡನೆ ಹೇಳಿದೆ: ಹೋಗಲು ಸಾಧ್ಯವಾದರೆ, ಧ್ವಜವನ್ನು ಹಾರಿಸು. ನನ್ನ ಅಭಿಪ್ರಾಯದಲ್ಲಿ, ಅವರು ಖಂಡಿತವಾಗಿಯೂ ಸದುದ್ದೇಶ ಮತ್ತು ಸ್ಫೂರ್ತಿಯಿಂದ ಇಸ್ಲಾಂ, ಅಹ್ಮದಿಯ್ಯತ್ ಮತ್ತು ಅಲ್ಲಾಹನ ಏಕತೆಯ ಸಂದೇಶವನ್ನು ತಲುಪಿಸಲು ಪ್ರಯತ್ನಿಸಿದರು. ಅದರಲ್ಲಿ ಯಶಸ್ಸನ್ನು ಸಹ ಪಡೆದರು. ಅದೇ ಉದ್ದೇಶದಲ್ಲಿ ಮಾಡಲಾದ ಯಾತ್ರೆಯಲ್ಲೇ ಅಲ್ಲಾಹನ ಮುಂದೆ ಹಾಜರಾದರು. ಅವರು ಖಂಡಿತವಾಗಿಯೂ ಶಹಾದತಿನ ಪದವಿಯನ್ನು ಪಡೆದಿರಬಹುದು. ಅಲ್ಲಾಹನು ಅವರನ್ನು ಶಹೀದರಲ್ಲಿ ಗಣಿಸಲಿ.

ಎರಡನೆಯದಾಗಿ ಡಾಕ್ಟರ್ ಅಬ್ದುಲ್ ಮಾಲಿಕ್ ಶಮೀಂ ಸಾಹಿಬ್‌ರ ಪತ್ನಿಯಾದ ಅಮತುನ್ನೂರ್ ಸಾಹಿಬ. ಜೂನ್ 15ರಂದು ಅಮೇರಿಕದ ವಾಶಿಂಗ್‌ಟನಿನಲ್ಲಿ ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ಸಾಹಿಬ್‌ಝಾದಿ ಅಮತುರ್ರಶೀದ್ ಬೇಗಂ ಸಾಹಿಬ ಮತ್ತು ಮಿಯಾ ಅಬ್ದುರ್ರಹ್ಮಾನ್ ಸಾಹಿಬ್‌ರ ಮಗಳಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೊಮ್ಮಗಳ ಮಗಳು ಮತ್ತು ತಾಯಿಯ ಕಡೆಯಿಂದ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರ ಮೊಮ್ಮಗಳ ಮಗಳಾಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್[(ರ)] ಮತ್ತು ಸಯ್ಯದ ಅಮತುಲ್ ಹಯ್ಯ್ ಸಾಹಿಬರ ಮೊಮ್ಮಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಹಝ್ರತ್ ಪ್ರೊಫೆಸರ್ ಅಲಿ ಅಹ್ಮದ್ ಬಿಹಾರಿಯವರ ಮೊಮ್ಮಗಳಾಗಿದ್ದರು.

ಮೂರನೆಯದಾಗಿ ಹಿಫಾಝುತೇ ಖಾಸಿನ ಆಫೀಸರ್ ಆದ ಸನ್ಮಾನ್ಯ ನಾಸಿರ್ ಅಹ್ಮದ್ ಖಾನ್ ಬಹದೂರ್ ಶೇರ್ ಸಾಹಿಬ್‌ರ ಪತ್ನಿಯಾದ ಬಿಸ್ಮಿಲ್ಲಾಹ್ ಬೇಗಂ ಸಾಹಿಬ ಅವರದು. ನಾಲ್ಕನೆಯದಾಗಿ ರಾವಲ್ಪಿಂಡಿಯ ಚೌಧರಿ ಅಬ್ದುಲ್‌ಗನಿ ಸಾಹಿಬ್‌ರ ಮಗನಾದ ಸನ್ಮಾನ್ಯ ಕರ್ನಲ್ ಜಾವೇದ್ ರುಶ್ದಿ ಸಾಹಿಬ್ ಅವರದು.

(ಹಝ್ರತ್ ಖಲೀಫತುಲ್ ಮಸೀಹರು ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***[(atba)]

*At, Masjid Mubarak, Islamabad, Tilford, UK, On 25-06-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon